ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (136)282
ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ ಮಾಗಡಿ ಮತ್ತು ರಾಮನಗರ ತಾಲ್ಲೂಕಿನ ಎಷ್ಟು ಪ್ರೌಢ ಶಾಲೆಗಳಿಗೆ ಕೊಠಡಿಗಳ ಕೊರತೆ ಇದೆ (ವಿವರ ಒದಗಿಸುವುದು)

<u>ರಾಮನಗರ ತಾಲ್ಲೂಕು:</u>

• ರಾಮನಗರ ತಾಲ್ಲೂಕಿನಲ್ಲಿ ಒಟ್ಟು 25 ಪ್ರೌಢಶಾಲೆಗಳು ಇದ್ದು ಅವುಗಳಲ್ಲಿ 22 ಪ್ರೌಢಶಾಲೆಗಳಿಗೆ ಸಾಕಷ್ಟು ಕೊಠಡಿಗಳು ಇದ್ದು, ಈ ಪ್ರೌಢಶಾಲೆಗಳಿಗೆ ಕೊಠಡಿಗಳ ಕೊರತೆ ಇರುವುದಿಲ್ಲ. ಹೆಬ್ಬಗೋಡಿ, ಕ್ಯಾಸಾಪುರ ಮತ್ತು ಹರಿಸಂದ್ರ ಸರ್ಕಾರಿ ಪ್ರೌಢಶಾಲೆಗಳಿಗೆ ಕೊಠಡಿಗಳ ಕೊರತೆ ಇದ್ದು, ಕೊಠಡಿಗಳ ನಿರ್ಮಾಣಕ್ಕಾಗಿ ಆರ್.ಐ.ಡಿ.ಎಫ್–13ರಡಿ ಪ್ರತಿ ಶಾಲೆಗೆ ತಲಾ 5 ಕೊಠಡಿಗಳ ನಿರ್ಮಾಣಕ್ಕಾಗಿ 20.00ಲಕ್ಷ ರೂ.ಗಳಂತೆ ಅನುದಾನವನ್ನು ಒದಗಿಸಲಾಗಿದೆ.

<u>ಮಾಗಡಿ ತಾಲ್ಲೂಕು</u>

• ಮಾಗಡಿ ತಾಲ್ಲೂಕಿನಲ್ಲಿ 22 ಪ್ರೌಢಶಾಲೆಗಳು ಇದ್ದು, ಅವುಗಳಲ್ಲಿ 19 ಪ್ರೌಢಶಾಲೆಗಳಿಗೆ ಸಾಕಷ್ಟು ಕೊಠಡಿಗಳು ಇದ್ದು ಈ ಪ್ರೌಢಶಾಲೆಗಳಿಗೆ ಕೊಠಡಿಗಳ ಕೊರತೆ ಇರುವುದಿಲ್ಲ, ಶ್ರೀಪತಿಹಳ್ಳಿ, ಕಾಗಿಮಡು, ಮತ್ತು ಸಂಕೀಘಟ್ಟ ಸರ್ಕಾರಿ ಪ್ರೌಢಶಾಲೆಗಳಿಗೆ ಒಟ್ಟು 15 ಕೊಠಡಿಗಳ ಕೊರತೆಯಿರುತ್ತದೆ. ಕೊಠಡಿಗಳ ನಿರ್ಮಾಣಕ್ಕಾಗಿ ಆರ್.ಐ.ಡಿ.ಎಫ್–13ರಡಿ ಪ್ರತಿ ಶಾಲೆಗೆ ತಲಾ 5 ಕೊಠಡಿಗಳ ನಿರ್ಮಾಣಕ್ಕಾಗಿ 20.00ಲಕ್ಷ ರೂ.ಗಳಂತೆ ಅನುದಾನವನ್ನು ಒದಗಿಸಲಾಗಿದೆ.

ಆ : ಹಾಗಾದರೆ ಈ ಕೊಠಡಿಗಳ ಕೊರತೆ ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

• ಆರ್.ಐ.ಡಿ.ಎಫ್.ಯೋಜನೆಯಡಿ ನಬಾರ್ಡ್‌ನ ಆರ್ಥಿಕ ನೆರವಿನೊಂದಿಗೆ ಸರ್ಕಾರಿ ಪ್ರೌಢಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡುವುದರ ಮೂಲಕ ಕೊರತೆಯನ್ನು ಸರದೂಗಿಸಲಾಗುತ್ತಿದೆ.